# ಹಾರುವ ಕಲ್ಲು

■ **ವಸಂತ ಕಲ್ ಬಾಗಲ್**
ಕಲೆ: ಭಾಸ್ಕರ್



ಅಪ್ಪಾ... ನಾರ್ವೆ, ಸ್ವೀಡನ್, ಫಿನ್ಲ್ಯಾಂಡ್, ಐಸ್ಲ್ಯಾಂಡ್‌ನಲ್ಲಿ 'ಫಾದರ್ಸ್ ಎಂಎಂಡೇ' ಅನ್ನು ನವೆಂಬರ್ ತಿಂಗಳಿನ ಎರಡನೆಯ ಭಾನುವಾರ ಆಚರಿಸುತ್ತಾರೆ ಗೊತ್ತಾ, ಅದಕ್ಕೇ ಇವತ್ತು ವಿಶ್ ಮಾಡೋಕ್ಕೆ ಫೋನ್ ಮಾಡಿದ್ದು' ಎಂದು ನಾರ್ವೆ ದೇಶದಲ್ಲಿ ನೆಲೆಸಿದ್ದ ಮಗಳು ತಂದೆಗೆ ವಿಡಿಯೊ ಕಾಲ್ ಮಾಡಿ ಹೇಳಿದಳು. ಅದರ ಪ್ರಯುಕ್ತ ಅವಳ ಅಪ್ಪ, ಫೋನಿನಲ್ಲೇ ಮಗಳಿಗೆ, ಮೊಮ್ಮಗಳಿಗೆ ಹಿಂದೆಂದೂ ಹೇಳದ ತನ್ನದೇ ಒಂದು ಉಪಕತೆಯನ್ನು ಶುರು ಹಚ್ಚಿಕೊಂಡರು.

ಹತ್ತೋ ಹನ್ನೊಂದೋ ವರ್ಷದ ಬಾಲಕನಾಗಿದ್ದಾಗಿನ ತನ್ನ ಬಾಲ್ಯದ ಕಥೆ ಹೇಳತೊಡಗಿದ ಅಪ್ಪ. ಶಾಲಾ ವಾರ್ಷಿಕ ದಿನದಂದು ಪ್ರದರ್ಶನ ನೀಡಲು, ತನ್ನನ್ನು 'ದ ಕಿಂಗ್ ಅಂಡ್ ದ ಫ್ಲೈಯಿಂಗ್ ಸ್ಟೋನ್' ಎಂಬ ಇಂಗ್ಲಿಷ್ ನಾಟಕಕ್ಕೆ ಮುಖ್ಯೋಪಾಧ್ಯಾಯರು ಆಯ್ಕೆ ಮಾಡಿದರು. ತನ್ನನ್ನೇ ಕಿಂಗ್‌ರಾಜನಾಗಿ ಆಯ್ಕೆ ಮಾಡಿದ್ದರು ಎಂದು ಹಿಗ್ಗಿದ್ದುಂಟು. ತನ್ನ ಮಗಳ ಪಾತ್ರದಲ್ಲಿ ಸಹಪಾಠಿ ಸುಧಾ ಆಯ್ಕೆ ಆಗಿದ್ದಳು.

ವಿಡಿಯೊ ಕಾಲ್‌ನಲ್ಲಿ ನೋಡುತ್ತಾ, ಏಕ ಚಿತ್ತವಾಗಿ ಆಲಿಸುತ್ತಾ ಕುಳಿತ ಮೊಮ್ಮಗಳಿಗೆ, ಮಗಳಿಗೆ, ತನ್ನ ಹಳೆಯ ಕತೆಯನ್ನು ಕಣ್ಣಿಗೆ ಕಟ್ಟುವಂತೆ ಅಪ್ಪ ಹೇಳಲು ಮುಂದಾದ. ಅವರ ಇಂಗ್ಲಿಷ್ ಡ್ರಾಮ ಟೀಚರ್ ಒಂದು ತಿಂಗಳ ಮುಂಚೆಯೇ 'ಡ್ರಾಮಾ ಪ್ರಾಕ್ಟೀಸ್'ಗಾಗಿ ದಿನವೂ ಶಾಲೆಗೆ ಬೆಳಿಗ್ಗೆಯೇ ಬರಲು ಹೇಳಿದ್ದರಂತೆ. ಟೀಚರಮ್ಮನ ಆದೇಶದಂತೆ, ಮಗಳ ಪಾತ್ರದಲ್ಲಿದ್ದ ಸುಧಾಳನ್ನು ದಿನವೂ ತಾನೇ ಕರೆತರಬೇಕಿತ್ತು. ಬೆಳ್ಳಂಬೆಳಿಗ್ಗೆ ತನ್ನ ಮನೆ ಇದ್ದ ವಿಶ್ವೇಶ್ವರಪುರದಿಂದ ನಡೆದು ಮೇಲಕ್ಕೆ ಅಶೋಕ ಪಿಲ್ಲರ್ ಬಳಿ ಹೋಗಿ ಅವಳ ಮನೆಯಿಂದ ಅವಳನ್ನು ಕರೆದುಕೊಂಡು ಮತ್ತೆ ತನ್ನ ಮನೆಯ ಮುಂದೆಯೇ ಹಾದು ಸರಸ್ವತೀ ವಿದ್ಯಾ ಮಂದಿರ ಶಾಲೆಗೆ ಹೋಗಬೇಕಿತ್ತಂತೆ. ಅಭ್ಯಾಸಕ್ಕಾಗಿ ಸತತವಾಗಿ ಒಂದು ತಿಂಗಳು ಈ ರೀತಿ ಮೇಲೆ ಕೆಳಗೆ ಓಡಾಟ ನಡೆಯಿತು. ಸುಧಾ ಜಡೆ ಹಾಕಿಸಿಕೊಳ್ಳುವ ತನಕ ಅವರ ಮನೆಯ ಹೊರಗಿನ ಜಗುಲಿಯ ಮೇಲೆ ತಾನು ಕುಳಿತು ಕಾಯಬೇಕಿತ್ತು. ಅವಳ ಅಮ್ಮ ದಿನವೂ 'ತಿಂಡಿ ಆಯ್ತೇನೋ' ಎಂದು ಕೇಳುತ್ತಿದ್ದಾಗ 'ಹ್ಞಾಂ ಆಯ್ತು' ಎಂದು ಹೇಳಿದವನಿಗೆ ಆಕೆ ಒಂದು ದಿನವೂ ಏನನ್ನೂ ತಿನ್ನಲು ಕೊಡಲಿಲ್ಲವಂತೆ, ಒಳಗೂ ಕರೆಯಲಿಲ್ಲವಂತೆ!

ನಾಟಕದ ಕಥೆ ಚೆನ್ನಾಗಿಯೇ ಇತ್ತು. ರಾಜ, ತನ್ನ ಮಗಳಿಗೆ ತಕ್ಕ ವರನನ್ನು ಹುಡುಕಲು ಒಂದು ಸ್ಪರ್ಧೆ ಇಟ್ಟ. 'ಯಾರಿಗೆ ಕಲ್ಲನ್ನು ಗಾಳಿಯಲ್ಲಿ ಹಾರಿಸಲು ಸಾಧ್ಯವೋ ಅವನೇ ರಾಜಕುಮಾರಿಯನ್ನು ವರಿಸಲು ತಕ್ಕವನು' ಎಂದು ಡಂಗೂರ ಸಾರಲಾಯಿತು. ತಮ್ಮ ಬಲಾಬಲಗಳನ್ನು ಪ್ರದರ್ಶಿಸಲು ಅನೇಕ ರಾಜಕುಮಾರರು ಬಂದರು. ಆದರೆ ಎಲ್ಲರ ಕಲ್ಲೂ ಹಾರದೆ, ತೇಲದೆ ಕೆಳಗೇ ಬೀಳುತ್ತಿತ್ತು. ಕಡೆಗೊಬ್ಬ ಬುದ್ಧಿವಂತ ಕುರಿ ಕಾಯುವ ಹುಡುಗ ಬಂದ. ರಾಜಕುಮಾರಿಯನ್ನು ನೋಡಿ ಅನುರಕ್ತನಾಗಿ ಅವಳನ್ನು ಪಡೆಯಲು ಒಂದು ಉಪಾಯ ಮಾಡಿದ. ಅವನು ಕಲ್ಲನ್ನು ತೆಗೆದುಕೊಂಡು ಚೆನ್ನಾಗಿ ಕುಟ್ಟಿ ಕುಟ್ಟಿ ಪುಡಿ ಮಾಡಿ ಅಂಗೈಯಲ್ಲಿ ಇಟ್ಟುಕೊಂಡು ಉಫ್ ಎಂದು ಗಾಳಿಯಲ್ಲಿ ತೂರಿಬಿಟ್ಟ. ಕಲ್ಲಿನ ಹುಡಿ ಹಾರಿಹೋದಾಗ ರಾಜನ ಮುಖದ ಮೇಲೆ ತುಂಟ ನಗೆ ಮೂಡಿತು. ಬುದ್ಧಿವಂತ ಅಳಿಯನನ್ನು ಹುಡುಕಿದುದಕ್ಕೆ ಜಂಬದಿಂದ ಬೀಗಿದ. ಮಗಳ ಪಾತ್ರದ ಸುಧಾಳಿಗೆ ರಾಜನಾದ ಅಪ್ಪ, ಮದುವೆ ಮಾಡಿಸಿದ.

ರಿಹರ್ಸಲ್ ದಿನ ಮತ್ತು ನಾಟಕದ ದಿನ, ರಾಜನ ವೇಷ ಹಾಕಿದ ಅಪ್ಪ, ಕನ್ನಡಿಯಲ್ಲಿ ನೋಡಿಕೊಂಡಾಗ, ತನ್ನ ಪ್ರತಿಬಿಂಬಕ್ಕೆ ತಾನೇ ಮೆಚ್ಚಿಕೊಂಡಿದ್ದಂತೂ ಸತ್ಯ. ಎತ್ತರದ ಥಳ ಥಳಿಸುವ ಕಿರೀಟ, ಎದೆಗೆ ಕಟ್ಟಿದ ನವರತ್ನ ಖಚಿತ ಕವಚ, ಉದ್ದನೆಯ ಧಮ್ಮಾಸ್ ನೇರಳೆ ನಿಲುವಂಗಿ, ಹೆಗಲಿನಿಂದ ಬೆನ್ನಮೇಲೆ ಇಳಿಬಿದ್ದ ಶುದ್ಧ ಬಿಳಿ ತುಪ್ಪಳದ ನೆಲ ಮುಟ್ಟುವ ಮೇಲಂಗಿ, ಕಾಲಿಗೆ ಮಕಮಲ್ ಪ್ಯಾಂಟು, ಹೊಳೆವ ಪಾದರಕ್ಷೆ ಎಲ್ಲವನ್ನೂ ತೊಟ್ಟು ವಿಜೃಂಭಿಸಿದ ಪೋಷಾಕಿನಲ್ಲಿ ತನ್ನ ಒಂದೇ ಒಂದು ಫೋಟೊ ಸಹ ಇಲ್ಲವಲ್ಲಾ ಎಂಬ ಬೇಸರವಿತ್ತು. ಮನೆಯಲ್ಲೇ ಈಲಿಯಾಫ್ಲೆಕ್ಸ್ ತರಹದ ಒಂದು ವಿದೇಶಿ ಬಾಕ್ಸ್ ಕ್ಯಾಮೆರಾ ಇದ್ದರೂ ತನ್ನ ಫೋಟೊ ತೆಗೆಯುವಂತಹ ಮನೆಯ ಹಿರಿಯರು ಯಾರೂ ಇಲ್ಲವೇ ಎಂಬ ಅನಿಸಿಕೆ ಬಹಳ ದಿನದವರೆಗೂ ಇತ್ತಂತೆ.

ನಾಟಕ ಲಗುಬಗೆಯಿಂದ ಜರುಗಿತು. ಮಾತು ನಿರರ್ಗಳವಾಗಿ ಸಾಗಿತು. ರಾಜನ ಸವಾಲನ್ನು ಎದುರಿಸಲು ನೆರೆ ರಾಜ್ಯಗಳಿಂದ ರಾಜಕುಮಾರರು ಸಾಲು ಸಾಲಾಗಿ ಬಂದರು. ಬಂದವರನ್ನು ರಾಜ ಪರೀಕ್ಷಿಸುವುದು, ಅವರ ವೈಫಲ್ಯಕ್ಕೆ ಹುಸಿನಗು ನಗುತ್ತಾ ಮುಂದಿನವರನ್ನು ಬರಮಾಡಿಕೊಳ್ಳುವುದು, ಹೀಗೇ ನಾಟಕೀಯವಾಗೇ ಅಂತ್ಯದವರೆಗೂ ನಡೆಯಿತು. ನಾಟಕ ಮುಗಿದ ನಂತರ ಕರತಾಡನದ ನಡುವೆ ಪ್ರೇಕ್ಷಕರ ಮಧ್ಯೆ ತನ್ನ ಮನೆಯವರ ಪರಿಚಿತ ಮುಖ ಕಾಣದೆ ಹೋದಾಗ, ಮೂಲೆಯಲ್ಲೆಲ್ಲೋ ರಾಜನ ಪಾತ್ರದಲ್ಲಿ ಇದ್ದ ಅಪ್ಪನಿಗೆ ಒಂದು ಕೊರೆ ಉಳಿದುಕೊಂಡುಬಿಟ್ಟಿತ್ತು. ವಿಷಾದವೆಂದರೆ, ತನ್ನ ನಾಟಕ ನೋಡಲು ಏಕೆ ತನ್ನ ಅಪ್ಪ, ಅಮ್ಮ, ಅಣ್ಣಂದಿರು, ತಮ್ಮ, ತಂಗಿ, ಅಕ್ಕಪಕ್ಕದವರು ಯಾರೂ ಬರಲಿಲ್ಲ ಎಂಬ ಕಾರಣ ತಿಳಿಯಲೇ ಇಲ್ಲ. ತಿಂಗಳು ಡ್ರಾಮಾ ಪ್ರಾಕ್ಟೀಸ್‌ಗೆ ಹೋದ ವಿಷಯ, ಮನೆಯವರಿಗೆ ತಿಳಿಯದೇನಿಲ್ಲ. ಆದರೂ ಸ್ವಾಭಿಮಾನದಿಂದಲೋ ಏನೋ ತಾನು ಯಾರನ್ನೂ ನೀವೇಕೆ ಬರಲಿಲ್ಲ ಎಂದೂ ಕೇಳಲಿಲ್ಲವಂತೆ! ಈ ಸಂಗತಿ ಈಗಲೂ ಮನದ ಆಳದಲ್ಲಿ ಆಗಾಗ ತಟ್ಟುತ್ತದಂತೆ. ತನ್ನ ಅಣ್ಣನ ನೃತ್ಯಕ್ಕೆ, ಅವನ ಕನ್ನಡ ನಾಟಕಗಳಿಗೆ, ಮನೆಯವರೆಲ್ಲಾ ಹೋದರೂ ತಾನು ಮಾಡಿದ ಇಂಗ್ಲಿಷ್ ನಾಟಕಕ್ಕೆ ಯಾರೂ ಬಾರದೆ ಹೋದರಲ್ಲಾ ಎಂಬ ಕೊರಗು ಈಗಲೂ ಉಳಿದಿದೆ ಎಂದು ಮಗಳಿಗೆ, ಮೊಮ್ಮಗಳಿಗೆ ಅಂದು ಹೇಳಿಕೊಂಡಾಗಲೇ ಅಷ್ಟು ವರ್ಷ ಮಡುಗಟ್ಟಿದ್ದ ದುಗುಡ ಒಮ್ಮೆಲೇ ಕರಗಿತು.

ಮಗಳು ನಿಟ್ಟುಸಿರು ಬಿಟ್ಟು, ಅಪ್ಪ ಇಲ್ಲಿ ನೋಡು ಇವಳು ಯಾವ ಹಾಡಿಗೆ ಡಾನ್ಸ್ ಮಾಡುತ್ತಾಳೆ ಅಂತ ಎಂದು ಮೊಮ್ಮಗಳಿಗೆ 'ನೀ ಯಾವೂರಿನವಳೇ ಗೊಲ್ಲಭಾಮೆ' ಹಾಡನ್ನು ಹಾಡಿದಳು. ಒಂದು ಹೆಜ್ಜೆಯನ್ನು ನೆಲಕ್ಕೆ ತಟ್ಟುತ್ತಾ, ಬಲಗೈಯನ್ನು ಬೀಸಿ ಪ್ರಶ್ನಾರ್ಥಕವಾಗಿ ಕೇಳುತ್ತಾ, ಕೃಷ್ಣನ ಕೊಳಲನ್ನು ಊದುತ್ತಾ ತಿರುಗುವುದನ್ನು ಮಗಳಿಗೆ ಹೇಳಿಕೊಡುತ್ತಿದ್ದಳು. ಮಗಳು ಗೋಪಿಯಂತೆ ಓಡೋಡಿ ಹಿಂಬಾಲಿಸುತ್ತಿದ್ದಳು. ಚಿಕ್ಕವನಿದ್ದಾಗ ಅಪ್ಪ ಈ ಹಾಡಿಗೆ, ರುಕ್ಮಿಣಮ್ಮನ ಮಗಳು ಸೀತುವಿನ ಜೊತೆ ಹಳ್ಳಿ ಮೈಸೂರ ಶಾಲೆಯಲ್ಲಿ ನೃತ್ಯವಾಡಿದ ಹಳೆಯ ಕಥೆಯನ್ನು ಅದೆಷ್ಟು ಬಾರಿ ಹೇಳಿರುವುದನ್ನು ನೃತ್ಯ ಮಾಡಿ ತೋರಿಸುವುದನ್ನು ಬೇಸರವಿಲ್ಲದೆ ಕೇಳಿದ್ದಳೋ ಮಗಳು. ಈಗ 'ಫಾದರ್ಸ್ ಡೇ'ಗಾಗಿ ಮೊಮ್ಮಗಳಿಗೆ ಕಲಿಸಿ, ವಿಡಿಯೊ ಮಾಡಿ ಕಳುಹಿಸುವ ಸನ್ನಾಹದಲ್ಲಿದ್ದಳು.

ಕಡೆಗೂ ಅಪ್ಪನಿಗೆ ತನ್ನವರು ಎಂಬುವವರು ಸಿಕ್ಕಂತಾಯಿತು! ಎದೆಯ ಕಲ್ಲು ಹೂವಾಗಿ ಹಾರಿತು. ■